'ಹುಂ, ಅಂದಹಾಗೆ ಹಿಡಿಯೋ ಮಾತು ಆಡಿದ್ರಲ್ಲ, ಯಾರಂತೆ, ಹಿಡಿದಿದ್ದು ಈಗ? ಹೇಗೆ?'

'ಓ ಅದೇ, ಬೆಳಗಿನ ಝಾವ ಯಾವ ಹೊತ್ತಿನಲ್ಲೋ ಸಾಹುಕಾರರ ಆಳೊಬ್ಬ ಜಲಬಾಧೆ ತೀರಿಸಿಕೊಳ್ಳೋಣ ಅಂತ ದೇವರಗುಡಿ ಹತ್ರ ಕೂತುಕೊಂಡಿದ್ದಾಗ ಗುಡಿಬಾಗಿಲ ಶಬ್ದ ಏನೋ ಆಯ್ತಂತೆ. ಆ ಕಡೆ ನೋಡಿದರೆ ಯಾರೋ ಒಬ್ಬ ತನ್ನ ಉಟ್ಟಿದ್ದ ಮೋಟು ಪಂಚೆ ಒಳಗೆ ಏನನ್ನೋ ಅವುಸಿಕೊಂಡು ಹೊರಗೆ ಹೋಗ್ತಾ ಇದ್ದದ್ದು ಕಾಣಿಸ್ತಂತೆ. ಅವನಿಗೆ ಅನುಮಾನ ಬಂದು ಯಾರು ಅಂತ ಕೂಗಿದ ಕೂಡ್ಲೆ ಕಳ್ಳ ಓಡೋದಕ್ಕೇ ಶುರುಮಾಡಿಬಿಟ್ಟನಂತೆ. ಊರಿನ ಆಚೆಗೆ. ಸರಿ ಆಳು ಜೋರಾಗಿ ಕೂಗಿಕೊಂಡ. ಇನ್ನೂ ನಾಲ್ಕು ಜನ ಆಳುಗಳು ಎದ್ದು ಓಡಿಬಂದ್ರು. ಎಲ್ಲಾರೂ ಕಳ್ಳನ ಹಿಂದೇ ಓಡಿದರಂತೆ ಅಟ್ಟಿಸಿಕೊಂಡು. ಕಳ್ಳ ಜೋರಾಗೇ ಓಡ್ತಾ ಇದ್ದನಂತೆ, ಕೈಗೆಸಿಕ್ಕದೆ. ಆದರೆ ಎಷ್ಟಾದರೂ ಸತ್ಯವಂತ, ಸರ್ವಶಕ್ತ ದೇವರ ವಿಚಾರ ಅಲ್ವೆ ಅದು!? ಕಳ್ಳನ ಕಾಲಿಗೆ ಗೊಬ್ಬಳಿ ಮುಳ್ಳು ಚುಚ್ಚಿಕೊಂಡು ಓಟ ನಿಧಾನವಾಯ್ತಂತೆ. ಇನ್ನೂ ಹೆಚ್ಚು ಅಂದ್ರೆ ನಮ್ಮ ದೇವರ ಕಳ್ಳ ಕಲ್ಲು ಎಡವಿ ಬೀಳೋಹಾಗೇ ಮಾಡಿಬಿಟ್ಟನಂತೆ. ಎಂಥ ಆಶ್ಚರ್ಯ ನೋಡಿ. ಸರಿ, ಆಳುಗಳು ಹಿಡಿದುಕೊಂಡರು. ಎಳೆದುಕೊಂಡು ಬಂದು ದೇವಸ್ಥಾನದ ಕಲ್ಯಾಣಮಂಟಪದ ಕಲ್ಲು ಕಂಬಕ್ಕೇ ಗಾಡಿ ಹಗ್ಗದಿಂದ ಬಿಗಿದರು. ನವನೀತ ಕೃಷ್ಣಸ್ವಾಮಿ ದೇವರ ಆಭರಣಗಳನ್ನೆಲ್ಲ ಕಿತ್ತುಕೊಂಡರು. ಸಾಹುಕಾರ್ರು ಎದ್ದ ಮೇಲೆ ಅವನ್ನೆಲ್ಲ ಅವರಿಗೆ ಒಪ್ಪಿಸಿದರು...'

'ಅದೆಲ್ಲ ಸರಿಕಣ್ರೀ, ಅಂಥ ನೀಚಕೃತ್ಯ ಮಾಡಿದ ಆ ಮಹಾ ಅಪರಾಧಿಗೆ, ಮಹಾ ಪಾತಕಿಗೆ, ಚೆನ್ನಾಗಿ ಅಷ್ಟು ಪೂಜೆಗೀಜೆ ಮಾಡಿದರೋ ಇಲ್ವೋ?'

'ಮಾಡ್ದೆ ಮತ್ತೆ? ಬಿಟ್ಟಾರೇ? ಅದೂ ನಮ್ಮ ಸಾಹುಕಾರ್ರ ಕೈಯಿಗೆ ಸಿಕ್ಕ ಮೇಲೆ? ಒಂದು ಹೊಡೆದರಂತೆ ಹೊಡೆದರಂತೆ, ಹಗ್ಗದಿಂದ, ಚಾವಟಿಯಿಂದ, ಕೋಲಿನಿಂದ, ಮೈಯಿನ ಮೇಲೆಲ್ಲ ಬಾಸುಂಡೆ ಬರಿಸಿ ಬರಿಸಿ ಚರ್ಮಾನ ಸುಲಿದಿದಾರಂತೆ ಆ ಭ್ರಷ್ಟನಿಗೆ. ಇನ್ನೂ ಮುಗಿದಿಲ್ಲವಂತೆ.'

'ಆಗಬೇಕು...'

'ಹೌದು, ಹಾಗೇ ಆಗಬೇಕು. ಕಳ್ಳಬಡ್ಡಿಮಗನಿಗೆ.'

'ಪ್ರಾಣಾನೇ ತೆಗೀಬೇಕಾಗಿತ್ತು, ಅಷ್ಟೊಂದು ಸಿಟ್ಟು ಬರುತ್ತೆ.'

'ಬನ್ನಿ, ಇನ್ನೂ ಏನೇನಾಗ್ತಾ ಇದೆಯೋ ನೋಡೋಣ ಹೋಗಿ.'

'ಹೌದು ಹೌದು, ನಡೀರಿ ನಡೀರಿ. ನೋಡಿ, ಊರಿಗೆ ಊರೇ ಹೋಗ್ತಾ ಇದೆ. ಗುಂಪುಗುಂಪಾಗಿ ಅಲ್ಲಿಗೆ.'

ಈ ಗುಂಪಿನ ಗ್ರಾಮಸ್ಥರೂ ಸರಿದರು ಬೇಗ ಬೇಗ, ಅತ್ತ ಕಡೆಗೆ.

ಹೌದು, ಮೂಗ ಅತ್ಯಂತ ಹೀನಕೃತ್ಯ ಮಾಡಿ ಬಿಟ್ಟಿದ್ದ. ನಿಸ್ಸಂಶಯವಾಗಿ, ಯಾರೂ ಸಮರ್ಥಿಸುವಂತಿರಲಿಲ್ಲ. ರುಜುವಾತಾಗಿಬಿಟ್ಟಿತ್ತು. ಗೋಕುಲ ಹಳ್ಳಿಯಲ್ಲಿ ಕೋಲಾಹಲವನ್ನು ಎಬ್ಬಿಸಿಬಿಟ್ಟಿತ್ತು.

## *2*

ಪ್ರಾಕಾರವಿಲ್ಲದ ದೇವಸ್ಥಾನದ ಮುಂಬದಿಯಲ್ಲಿ ಭಾರಿ ಜನ ದಟ್ಟಯಿಸಿದ್ದರು. ಎಲ್ಲ ವಯಸ್ಸಿನ ಗಂಡಸರು, ಹೆಂಗಸರು, ಹುಡುಗರು, ಮಕ್ಕಳು, ಬಗೆಬಗೆಯ ಜನ ಬಗೆಬಗೆಯ ಭಂಗಿಗಳಲ್ಲಿ, ಸಣ್ಣ ದೊಡ್ಡ ಗುಂಪುಗಳಲ್ಲಿ, ಒಟ್ಟೊಟ್ಟಾಗಿಯೂ, ಎತ್ತು ನೇಗಿಲು ಗುದ್ದಲಿಗಳ ರೈತರು, ಗೊಬ್ಬರಗೋಡಿನ ಗಾಡಿಯವರು, ದನ ಕುರಿ, ಆಡು ಮೇಯಿಸಲು ನಾಯಿಗಳೊಂದಿಗೆ ಹೊರಟಿದ್ದವರು, ಶಾಲೆ ಬಿಟ್ಟು ಬಂದಿದ್ದ ಹುಡುಗರು ಮೇಷ್ಟರು. ಕೆಲಸಗಳನ್ನು ಅಲ್ಲಲ್ಲಿಗೇ ನಿಲ್ಲಿಸಿ